ಸಿಸಿ ನಂಃ 4102/2023

ಸಿ.ಡಬ್ಲೂ 1/

ಪಿ.ಡಬ್ಲೂ 4

**4 ನೇ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ರವರ ನ್ಯಾಯಾಲಯ**

**ಧಾರವಾಡ.**

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕಿರಣ |
| ತಂದೆಯ ಹೆಸರು | ಃ | ಮಧುಕರ್ ಜೋಶಿ |
| ವಯಸ್ಸು | ಃ | 46 ವರ್ಷ |
| ಉದ್ಯೋಗ | ಃ | ಫುಡ್ ಇನ್ಸಪೆಕ್ಟರ್ |
| ವಾಸ ಸ್ಥಳ | ಃ | ಧಾರವಾಡ . |

ಸತ್ಯ ಪ್ರತಿಜ್ಞೆ ಮಾಡಿಸಲಾಯಿತು ಃ **28.10.2025**

**ಮುಖ್ಯ ವಿಚಾರಣೆ ಃ ಮಾನ್ಯ ಹಿಸಸಅ ರವರಿಂದ**

ನಾನು ಕಳೆದ 4 ವರುಷಗಳಿಂದ ಧಾರವಾಡದಲ್ಲಿ ಫುಡ್ ಇನ್ಸಪೇಕ್ಟರ್ ಆಗಿ ಕೆಲಸ ಮಾಡಿರುತ್ತೇನೆ.

ದಿಃ 20.09.2022 ರಂದು ಸುಮಾರು 12.30 ರ ಸುಮಾರಿಗೆ ಪಡಿತರ ಅಕ್ಕಿಯನ್ನು ಸಾಗಾಣಿಕೆ ಮಾಡುತ್ತಿದ್ದಾರೆ ಎಂದು ನಮಗೆ ಪೊನ ಬಂದಿತ್ತು. ನಂತರ ನಾವು ವಿಷಯವನ್ನು ಮೇಲಾಧಿಕಾರಿ ತಿಳಿಸಿ ಪೋಲಿಸ ಠಾಣೆಗೆ ಹೊಗಿರುತ್ತೇವೆ. ಸದರಿ ವಿಚಾರವನ್ನು ನಾವು ಇನ್ಸಪೇಕ್ಟರ್ ರವರಿಗೆ ತಿಳಿಸಿ ನಾವು ಹಾಗೂ ಪೋಲಿಸ ಸಿಬ್ಬಂದಿಯವರು ಯರಿಕೊಪ್ಪ ಟೋಲ ಹತ್ತಿರ ಹೊಗಿರುತ್ತೇವೆ. ಆ ದಿನ ನಾವು , ಪೋಲಿಸರು ಸಿಬ್ಬಂದಿ ಹಾಗೂ ಪಂಚರು ಸೇರಿ

ಸಿಸಿ ನಂಃ 4102/2023
ಸಿ.ಡಬ್ಲೂ 1/
ಪಿ.ಡಬ್ಲೂ 4

ಅಲ್ಲಿಗೆ ಹೊಗಿದ್ದೆವು. ಆಗ ಧಾರವಾಡ ಕಡೆಯಿಂದ ಒಂದು ಆಟೊ ನಂ.ಕೆಎ.63/1653 ಪೋಲಿಸರು ಯರಿಕೊಪ್ಪ ಗ್ರಾಮದೊಳಗೆ ಆಟೊ ತೆಗೆದುಕೊಂಡು ಹೊಗಿರುತ್ತಾರೆ. ಸದರಿಯವರು ಆ ಗ್ರಾಮದ ಅಂಗನವಾಡಿ ಹತ್ತಿರ ಹೊಗಿರುತ್ತಾರೆ. ಆಗ ಅಲ್ಲಿದ್ದ ಊರ ಜನರು ಅವರನ್ನು ಹಿಡಿದಿರುತ್ತಾರೆ. ನಂತರ ನಾವು ಅವರ ಬಳಿ ಇದ್ದ ಅಕ್ಕಿ ಚೀಲವನ್ನು ತೂಕ ಮಾಡಿರುತ್ತೇವೆ. ಒಟ್ಟು 2 ಕ್ವಿಂಟಲ್ 40 ಕೆ ಜಿ ಅಕ್ಕಿ ಎರಡು ಪ್ಲಾಸ್ಟಿಕ ಚೀಲದಲ್ಲಿ ಇದ್ದವು. ಸದರಿ ಅಕ್ಕಿ ಚೀಲಗಳನ್ನು ಪೋಲಿಸರಿಗೆ ಹಸ್ತಾಂತರ ಮಾಡಿರುತ್ತೇವೆ. ಪಂಚರ ಸಮಕ್ಷಮ ಸದರಿ ಅಕ್ಕಿಗಳನ್ನು ಪೋಲಿಸರಿಗೆ ಕೊಟ್ಟು ನಂತರ ಠಾಣೆಗೆ ಬಂದು ದೂರನ್ನು ನೀಡಿರುತ್ತೇನೆ. ಸದರಿ ಅಕ್ಕಿಗಳ ಪೈಕಿ 10 ಕೆ ಜಿ ಅಕ್ಕಿಯನ್ನು ಸ್ಯಾಂಪಲಗಾಗಿ ತೆಗೆದು ಪೋಲಿಸರಿಗೆ ನೀಡಿರುತ್ತೇವೆ. ಮದ್ಯಾಹ್ನ 2.30 ಕ್ಕೆ ಮೇಲೆ ಹೇಳಿದ ಕೆಲಸವನ್ನು ಮಾಡಿರುತ್ತೇವೆ. ಆ ದಿನ ಆಟೊ ಚಾಲಕನನ್ನು ನಾವು ವಿಚಾರಿಸಿದ್ದು ಆತನ ಹೆಸರು ಗೊತಿತಲ್ಲ ಆತ ಸದರಿ ಅಕ್ಕಿಗಳನ್ನು ಹುಬ್ಬಳ್ಳಿಯ ಸೊನಿಯಾಗಾಂಧಿ ನಗರದಲ್ಲಿರುವ ಒಂದು ಸ್ಟೊರೂಂಗೆ ಕಳಿಸುತ್ತೇವೆ ಎಂದು ಹೇಳಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿಯನ್ನು ಸಾಕ್ಷಿ ಗುರುತಿಸಿರುತ್ತಾರೆ. 2 ನೇ ಆರೋಪಿ ಗೈರು ಹಾಜರಾಗಿದ್ದ ಆತನ ಗುರುತಿಸುವಿಕೆಗೆ ತಕರಾರು ಇಲ್ಲ ಎಂದು ವಕೀಲರು ಹೇಳುತಾತರೆ. ಸಾಕ್ಷಿ ದೂರನ್ನು ನೊಡಿ ಗುರುತಿಸಿದ್ದು ಅದನ್ನು **ನಿಪಿ.4**

ಎಂದು , ಸಾಕ್ಷಿ ಸಹಿ **ನಿಪಿ.4(ಎ)** ಎಂದು ಗುರುತಿಸಲಾಯಿತು. ನಿಪಿ.1 ರಲ್ಲಿರುವ ಸಹಿಯನ್ನು ಗುರುತಿಸಿದ್ದು ಅದನ್ನು **ನಿಪಿ.1(ಸಿ)** ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿ ಪರ ಶ್ರೀ ವಿ ಜಿ ಹೆಚ್ ವಕೀಲರಿಂದ**

1. ನಮ್ಮ ಕಚೇರಿಯಲ್ಲಿ ಚಲನ-ವಲನ ರೆಜಿಸ್ಟರ್ ಇದೆ ಎಂದರೆ ಸರಿ. ನಾವು ಕಚೇರಿಯಿಂದ ಆಚೆ ಹೋದರೇ ಅದರ ಬಗ್ಗೆ ಚಲನ-ವಲನ ರೆಜಿಸ್ಟರ್ ನಲ್ಲಿ ನಮೂದು ಮಾಡುತೆತೇವೆ ಎಂದರೆ ಸರಿ. ಆ ದಿನ ನಮಗೆ ಮಾಹಿತಿ ಬಂದರೇ ಸದರಿ ಚಲನ-ವಲನ ರೆಜಿಸ್ಟರ್ ಬರೆದಿದ್ದೆನೊ ಇಲ್ಲವೂ ನನಗೆ ನೆನಪಿಲ್ಲ. ನಿಪಿ.4 ಠಾಣೆಯಲ್ಲಿ ತಯಾರು ಮಾಡಿ ಠಾಣೆಯಲ್ಲಿ ಸಹಿ ಮಾಡಿದ್ದೆನೆ ಎಂದರೆ ಸರಿ. ಅದೇ ರಿತಿ ನಿಪಿ.1 ರಲ್ಲಿರುವ ಸಹಿಯನ್ನು ಸಹ ಠಾಣೆಯಲ್ಲಿ ಮಾಡಿದ್ದೆನೆ ಎಂದರೆ ಸರಿ. ನನಗೆ ಬಂದ ಮಾಹಿತಿಯ ಬಗ್ಗೆ ನನ್ನ ದೂರಿನಲ್ಲಿ ನಮೂದು ಮಾಡಿಲ್ಲ ಎಂದರೆ ಸರಿ. ಅದೇ ರಿತಿ ನಮ್ಮ ಮೇಲಾಧಿಕಾರಿ ಮಾಹಿತಿ ಯಾವ ರಿತಿ ಬಂದಿತ್ತು ಎಂದು ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿ.

2. ನಮ್ಮ ಕಚೇರಿಯಿಂದ ಗ್ರಾಮಿಣ ಠಾಣೆ ಸುಮಾರು 3 ಕಿ ಮಿ ಇದೆ ಎಂದರೆ ಸರಿ. ನಾವು ನಮ್ಮ ಇಲಾಖಾ ವಾಹನ ಉಪಯೊಗಿಸಿದರೇ ಅದನ್ನು ಲಾಗ್ ಬುಕನಲ್ಲಿ ನಮೂದು ಮಾಡಬೇಕು ಎಂದರೆ ಸರಿ. ನನ್ನ ದೂರಿನಲ್ಲಿ ಯಾವ ವಾಹನದ ಮೂಲಕ ಠಾಣೆಗೆ ಬಂದೆವು

ಸಿಸಿ ನಂಃ 4102/2023
ಸಿ.ಡಬ್ಲೂ 1/
ಪಿ.ಡಬ್ಲೂ 4

ಹಾಗೂ ಠಾಣೆಯಿಂದ ಯರಿಕೊಪ್ಪ ಗ್ರಾಮಕ್ಕೆ ಯಾವ ವಾಹನದಲ್ಲಿ ಹೊದೆವು ಎನ್ನುವ ವಿಚಾರವನ್ನು ಬರೆಸಿಲ್ಲ ಎಂದರೆ ಸರಿ. ನನ್ನ ಕಚೇರಿಗೆ ತಹಶೀಲ್ದಾರ ಕಚೇರಿ 52 ಅಡಿ ದೂರದಲ್ಲಿ ಇದೆ ಎಂದರೆ ಸರಿ. ಅದೇ ರಿತಿ ಉಪನೊಂದಾಣಿಧಿಕಾರಿ ಕಚೇರಿ ಹಾಗೂ ಜಿಲ್ಲಾಧಿಕಾರಿ ಕಚೇರಿ ಸುಮಾರು 200 ಅಡಿ ದೂರದಲ್ಲಿದೆ ಎಂದರೆ ಸರಿ. ಆ ದಿನ ನಾನು ಲಿಖಿತವಾಗಿ ಮೇಲಾಧಿಕಾರಿಗಳ ಸರ್ಚ ವಾರೆಂಟ ಪಡೆದಿಲ್ಲ ಆದರೇ ವಿಚಾರವನ್ನು ಮ್ವಖಿಕವಾಗಿ ತಿಳಿಸಿರುತ್ತೇನೆ. ಅದೇ ರಿತಿ ಈ ವಿಚಾರವನ್ನು ದೂರನಲ್ಲಿ ನಾನು ನಮೂದು ಮಾಡಿಲ್ಲ. ನನಗೆ ಸರ್ಚ ವಾರೆಂಟ ನ್ನು ಪಡೆದುಕೊಳ್ಳಲು ಸಾಕಷ್ಟು ಸಮಯವಿದ್ದರು ಸಹ ಅದನ್ನು ಪಡೆದುಕೊಳ್ಳಲಿಲ್ಲ ಎಂದರೆ ಸರಿಯಲ್ಲ.

3. ನುಗ್ಗಿಕೇಲರಿಯಿಂದ ಕಲಘಟಗಿ ವರಗೂ ಎಲ್ಲ ರೈತರು ಸಾಮಾನ್ಯವಾಗಿ ಭತ್ತ ಬೆಳೆಯುುತ್ತಾರೆ ಎಂದರೆ ಸರಿ. ಸದರಿ ಭತ್ತ ಗಿರಣಿಗೆ ಹಾಕಿದಾಗ ನುಚ್ಚಕ್ಕಿ ಆಗುತ್ತದೆ ಎಂದರೆ ಸರಿ. ನಾನು ಸದರಿ ಅಕ್ಕಿಗಳು ಪಡಿತರ ಅಕ್ಕಿ ಅಥವಾಗಿ ರೈತರು ಬೆಳೆದ ಅಕ್ಕಿ ಎಂದು ಗುರುತಿಸಲು ತಜ್ಞ ಅಲ್ಲ ಎಂದರೆ ಸರಿ. ಆ ದಿನ ಕೆಎ.63/1653 ರಿಕ್ಷಾ ಯರಿಕೊಪ್ಪ ಗ್ರಾಮದ ಹತ್ತಿರ ಬಂದಿರಲಿಲ್ಲ ಎಂದರೆ ಸರಿಯಲ್ಲ. ಸದರಿ ರಿಕ್ಷಾದಲ್ಲಿ 2 ಕ್ವಿಂಟಲ್ 40 ಕೆ ಜಿ ಅಕ್ಕಿ ಸಿಕ್ಕಿದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಅದೇ ರಿತಿ ಸದರಿ ಅಕ್ಕಿಗಳ ಪೈಕಿ 10 ಕೆಜಿ ಅಕ್ಕಿ ಸ್ಯಾಂಪಲ ತೆಗೆದುಕೊಂಡು ಉಳಿದ ಅಕ್ಕಿಗಳನ್ನು ಜಪ್ತಿ ಮಾಡಿದ್ದೆವೆ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಹಾಗೂ ದೂರಿನಲ್ಲಿ ಅಕ್ಕಿ ಜಪ್ತು ಪ್ರೊಸಿಜರ್ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಪಂಚರನ್ನು ಪಂಚನಾಮೆಗೆ ಬರಲು ನಾನಾಗಲಿ ಪೋಲಿಸರಾಗಲಿ ನೊಟಿಸ ಕೊಟ್ಟಿಲ್ಲ ಎಂದರೆ ಸರಿ. ಪಂಚನಾಮೆಯನ್ನು ಪಂಚರು ಹೇಳಿ ಬರೆಸಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದರೆ ಬರೆದಿದ್ದನ್ನು ಅವರಿಗೆ ಓದಿ ಹೇಳಿರುತ್ತೇವೆ. ನಾವು ಸದರಿ ವಿಚಾರವನ್ನು ಪಂಚರಿಗೆ ಓದಿ ಹೇಳಿಲ್ಲ ಎಂದರೆ ಸರಿಯಲ್ಲ. ಮಾದರಿ ಅಕ್ಕಿಯನ್ನು ಪಡೆದ ಮೇಲೆ ಉಳಿದ ಅಕ್ಕಿಯನ್ನು ಎಲ್ಲಿಗೆ ಕಳಿಸಿದೆವು ವಿಚಾರವನ್ನು ದೂರಿನಲ್ಲಿ ಹಾಗೂ ಪಂಚನಾಮೆ ಯಲ್ಲಿ ಬರೆದಿಲ್ಲ ಅದರೆ ಗೂಡಾನಿಗೆ ಕಳಿಸಿರುತ್ತೇವೆ. ಸದರಿ ಅಕ್ಕಿ ಗೂಡಾನಿಗೆ ಕಳಿಸಿದ ಬಗ್ಗೆ ಪತ್ರ ವ್ಯವಹಾರ ಮಾಡಿರುತ್ತೇವೆ. ಅ ಬಗ್ಗೆ ನಾವು ದಾಖಲೆಗಳನ್ನು ಪೋಲಿಸರಿಗೆ ನೀಡಿರುತೆತೇವೆ. ನಾನು ಯಾವದೇ ದಾಖಲೆ ನೀಡಿಲ್ಲ ಎಂದರೆ ಸರಿಯಲ್ಲ. ನಾವು ಪ್ರಕರಣವನ್ನು ದಾಖಲೆ ಮಾಡವುದರಿಂದ ಹಿಡಿದು ಜಪ್ತಿ ಮಾಡುವವರಗೂ ಹಾಗೂ ವಿವರಣೆಯನ್ನು ಮೂಮೆಂಟ ರೆಜಿಸ್ಟರನಲ್ಲಿ ಬರೆಯುತ್ತೇವೆ ಎಂದರೆ ಸರಿ. ಅದರ ಪ್ರತಿಯನ್ನು ಪೋಲಿಸರಿಗೆ ನೀಡಿಲ್ಲ. ಅದೇ ರಿತಿ ದಿಃ 20.09.2022 ರಂದು ನಾವು ಯರಿಕೊಪ್ಪ ಗ್ರಾಮಕ್ಕೆ ಹೊಗಿ ಆರೋಪಿ ಮೇಲೆ ಹೇಳಿದ ಆಟೊದಲ್ಲಿ ಪಡಿತರ ಅಕ್ಕಿಯನ್ನು ತೆಗೆದುಕೊಂಡು ಬಂದಿಲ್ಲ ಹಾಗೂ ಆತನ ಸಮಕ್ಷಮ ಯಾವದೇ ಅಕ್ಕಿ ಜಪ್ತಿ ಮಾಡಿಲ್ಲ ಎಂದರೆ ಸರಿಯಲ್ಲ. ಅದೇ ರಿತಿ ಆರೋಪಿ ಅ ಅಕ್ಕಿಯನ್ನು ಹುಬ್ಬಳ್ಳಿಗೆ ಒಯುತ್ತಿದ್ದೆ ಎಂದು ಹೇಳಿದ ಎಂದು ಸುಳ್ಳು ಸಾಕ್ಷಿ

ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವದೇ ಪಂಚನಾಮೆ ಆಗಿಲ್ಲ ಪೋಲಿಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೆನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾ.ಹಾಗೂ ಜೆಎಂಎಫ್‌ಸಿ,
ಧಾರವಾಡ.